## ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

ಸಂ:ಕಂ:.ವಿವಾದ:25/2015-16 ದಿ:24-06-2016

ಉಪಸ್ಥಿತರು: ಜಿ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

**ವಾದಿಗಳು**

1) ಕೆ. ಗಿರಿಮಲ್ಲಪ್ಪ ತಂದೆ: ಕೆ. ಹನುಮಂತಪ್ಪ
ಅರಿಕೇರಿ ಗ್ರಾಮ ಆಲೂರು ತಾಲೂಕ
ಕರ್ನೂಲು ಜಿಲ್ಲೆ. (ಎ.ಪಿ.)
2) ಕುರುಬರ ಚಾಗಪ್ಪ ತಂದೆ: ಕುರುಬರ ಮಲ್ಲಪ್ಪ
ಉತ್ತನೂರು ಗ್ರಾಮ , ಸಿರುಗುಪ್ಪ ತಾಲೂಕ

**ಪ್ರತಿವಾದಿಗಳು**

ಆದೆಮ್ಮ ಗಂಡ: ಕೆ. ಶಂಕ್ರಪ್ಪ
ಉತ್ತನೂರು ಗ್ರಾಮ
ಸಿರುಗುಪ್ಪ ತಾಲೂಕ

**ವಿವಾದಿತ ಜಮೀನಿನ ವಿವರ**

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ | ವಹಿವಾಟು ಸಂಖ್ಯೆ |
|---|---|---|---|---|
| ಉತ್ತನೂರು ಗ್ರಾಮ | 122/A1<br>134/A2B2<br>134 A2B3<br>134 A2B4 | 0-86<br>0-20<br>0-46<br>0-51 | 47/ 2013-14 | 145/2013-14 |

ಪೀಠಿಕೆ:-

ಸಿರುಗುಪ್ಪ ತಾಲೂಕಿನ ಉತ್ತನೂರುಗ್ರಾಮದ ಸ.ನಂ. 122/A1, ವಿಸ್ತೀರ್ಣ 0-86 134/A2B2, ವಿಸ್ತೀರ್ಣ 0-20 134 A2B3, ವಿಸ್ತೀರ್ಣ 0-46 ಮತ್ತು 134 A2B4 , ವಿಸ್ತೀರ್ಣ 0-51 ಜಮೀನಿಗೆ ಸಂಭಂದಿಸಿದಂತೆ ಸಿರುಗುಪ್ಪ ಉಪ ನೊಂದಣಿ ಕಛೇರಿ ಪತ್ರ ನಂ: SRG-1-01426/14-15 Dt.13-6-2014 ರ ಪ್ರಕಾರ ಕೆ. ಗಿರಿ ಮಲ್ಲಪ್ಪ ತಂದೆ: ಕೆ.ಹನುಮಂತಪ್ಪ ಹೆಸರಿನಲ್ಲಿ ಖಾತೆಬದಲಾವಣೆ ಮಾಡಲು ನಮೂನೆ -21 ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ ಆದೆಮ್ಮ ಗಂಡ: ಕೆ.ಶಂಕ್ರಪ್ಪ ಉತ್ತನೂರು ಗ್ರಾಮ ಇವರು ದಿ:13-6-2014 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನು 17-10-2015 , 18-3-2016, 2-4-2016, 22-4-2016, 29-5-2016, ಮತ್ತು 17-6-2016 ಪ್ರಕರಣಕ್ಕೆ ಸಂಭಂದಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳ...

## ವಾದಿಗಳು

ವಾದಿಗಳಾದ ಕೆ. ಗಿರಿಮಲ್ಲಪ್ಪ ತಂದೆ: ಹನುಮಂತಪ್ಪ ಅರಿಕೇರಿ ಗ್ರಾಮ , ಆಲೂರು ತಾಲೂಕ ಇವರು ಉತ್ತನೂರು ಗ್ರಾಮದ ಉತ್ತನೂರುಗ್ರಾಮದ ಸ.ನಂ. 122/A1, ವಿಸ್ತೀರ್ಣ 0–86, 134/A2B2, ವಿಸ್ತೀರ್ಣ 0-20 134 A2B3, ವಿಸ್ತೀರ್ಣ 0–46 ಮತ್ತು 134A2B4, ವಿಸ್ತೀರ್ಣ 0–51 ಜಮೀನು ಕುರುಬರ ಚಾಗಪ್ಪ ತಂದೆ: ಕುರುಬರ ಮಲ್ಲಪ್ಪ ಇವರಿಂದ ಸಿರುಗುಪ್ಪ ಉಪ ನೊಂದಣಿ ಕಛೇರಿ ಪತ್ರ ನಂ: SRG-1-01426/14-15 Dt.13-6-2014 ರ ಪ್ರಕಾರ ಖರೀದಿಸಿ ವಿಕ್ರಯ ಪತ್ರ ಪ್ರಕರ ನೊಂದಣಿ ಮಾಡಿಕೊಂಡು ಹಕ್ಕು ಬದಲಾವಣೆ ಸಂದರ್ಭದಲ್ಲಿ ಆದೆಮ್ಮ ಗಂಡ: ಕೆ. ಶಂಕ್ರಪ್ಪ ಇವರು ತಮಗೂ ಆಸ್ತಿಯಲ್ಲಿ ಪಾಲು ಬರಬೇಕೆಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಈಗ ದೊಡ್ಡ ಮನುಷ್ಯರ ಪರಿಷ್ಕಾರ ಮಾಡಿದ ಪ್ರಕಾರ ತಮ್ಮ ತಕರಾರು ಅರ್ಜಿಯನ್ನು ಹಿಂದಕ್ಕೆ ಪಡೆದಿರುವುದಾಗಿ ಮತ್ತು ಹಿರಿಯ ಸಿವಿಲ್ ನ್ಯಾಯಾಲಯ ಬಳ್ಳಾರಿ ಇವರ ಓ.ಎಸ್. ನಂ; 230/2014 ರ ತೀರ್ಮಾನದ ಆದೇಶ ಪ್ರಕಾರ ಹಾಗೂ ಸಿರುಗುಪ್ಪ ಉಪನೊಂದಣಿ ಕಛೇರಿ ಪತ್ರ ನಂ: SRG-1-01426/14-15 Dt.13-6-2014 ರ ಖರೀದಿ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಪ್ರಮಾಣಪತ್ರ ಸಲ್ಲಿಸಿರುತ್ತಾರೆ.

## ಪ್ರತಿವಾದಿಗಳು

ಪ್ರತಿವಾದಿಗಳಾದ ಆದೆಮ್ಮ ಗಂಡ: ಕೆ. ಶಂಕ್ರಪ್ಪ ಉತ್ತನೂರು ಗ್ರಾಮ ಸಿರುಗುಪ್ಪ ತಾಲೂಕ ಇವರು ಉತ್ತನೂರುಗ್ರಾಮದ ಸ.ನಂ. 122/A1, ವಿಸ್ತೀರ್ಣ 0–86 134/A2B2, ವಿಸ್ತೀರ್ಣ 0-20 134 A2B3, ವಿಸ್ತೀರ್ಣ 0–46 ಮತ್ತು 134A2B4, ವಿಸ್ತೀರ್ಣ 0–51 ಜಮೀನುಗಳನ್ನು ಕೆ.ಗಿರಿಮಲ್ಲಪ್ಪ ತಂದೆ: ಕೆ. ಹನುಮಂತಪ್ಪ ಅರಿಕೇರಿ ಗ್ರಾಮ, ಆಲೂರು ತಾಲೂಕ ಇವರು ಸಿರುಗುಪ್ಪ ಉಪ ನೊಂದಣಿ ಕಛೇರಿ ಪತ್ರ ನಂ: SRG-1-01426/14-15 Dt.13-6-2014 ರ ಪ್ರಕಾರ ವಿಕ್ರಯ ಪತ್ರ ನೊಂದಣಿ ಹೊಂದಿ, ಹಕ್ಕು ಬದಲಾವಣೆ ಸಂದರ್ಭದಲ್ಲಿ ನಾನು ಸದರಿ ಆಸ್ತಿಯಲ್ಲಿ ಪಾಲು ಬರಬೇಕೆಂದು ದಿ: 16–6–2014 ರಂದುತಕರಾರು ಅರ್ಜಿಯನ್ನು ಸಲ್ಲಿಸಿರುತ್ತೇನೆ. ಈಗ ದೊಡ್ಡ ಮನುಷ್ಯರು ಪರಿಷ್ಕಾರ ಮಾಡಿದ ಪ್ರಕಾರ ತಕರಾರು ಅರ್ಜಿಯನ್ನು ಹಿಂದಕ್ಕೆ ಪಡೆದಿರುತ್ತೇನೆ. ಮತ್ತು ಹಿರಿಯಸಿವಿಲ್ ನ್ಯಾಯಾಲಯ ಬಳ್ಳಾರಿ ಇವರ ಆದೇಶ ಪ್ರಕಾರ ಮತ್ತು ಸಿರುಗುಪ್ಪ ಉಪ ನೊಂದಣಿ ಕಛೇರಿ ಪತ್ರ ನಂ: SRG-1-01426/14-15 Dt.13-6-2014 ರ ಪತ್ರ ಪ್ರಕಾರ ಕೆ. ಗಿರಿಮಲ್ಲಪ್ಪ ತಂದೆ: ಕೆ. ಹನುಮಂತಪ್ಪ ಅರಿಕೇರಿ ಗ್ರಾಮ ಇವರ ಹೆಸರಿಗೆ ಹಕ್ಕು ಬದಲಾವಣೆ ಮಾಡಬಹುದೆಂದು ಪ್ರಮಾಣಪತ್ರ ಸಲ್ಲಿಸಿರತ್ತಾರೆ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ ವಿಚಾರಣೆ ಮಾಡಲಾಗಿ ಸದರಿ ಜಮೀನು ಸಿರುಗುಪ್ಪ ಉಪ ನೊಂದಣಿ ಕಛೇರಿ ಪತ್ರ ನಂ: SRG-1-01426/14-15 Dt.13-6-2014 ರ ನೊಂದಣಿ ಪತ್ರ ಪ್ರಕಾರ ಮತ್ತು ಹಿರಿಯ ಸಿವಿಲ್ ನ್ಯಾಯಾಲಯ ಬಳ್ಳಾರಿ ಇವರ ಆದೇಶದನ್ವಯ ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಉತ್ತನೂರು ಗ್ರಾಮದ ಸ.ನಂ. 122/A1, ವಿಸ್ತೀರ್ಣ 0–86, 134/A2B2, ವಿಸ್ತೀರ್ಣ 0-20, 134 A2B3, ವಿಸ್ತೀರ್ಣ 0–46 ಮತ್ತು 134 A2B4, ವಿಸ್ತೀರ್ಣ 0–51 ಜಮೀನುಗಳನ್ನು ಸಿರುಗುಪ್ಪ ಸಬ್ ಉಪನೊಂದಣಿ ಕಛೇರಿ ಪತ್ರ ನಂ: SRG-1-01426/14-15 Dt.13-6-2014 ರ ನೊಂದಣಿ ಪತ್ರಪ್ರಕಾರ ಹಾಗು ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯ ಬಳ್ಳಾರಿ ಇವರ ಆದೇಶದನ್ವಯ ಕೆ.ಗಿರಿಮಲ್ಲಪ್ಪ ತಂದೆ: ಕೆ.ಹನುಮಂತಪ್ಪ ಇವರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 24–06–2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ಉಪ ತಹಸೀಲ್ದಾರರು,
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕರೂರು.
ಸಿರುಗುಪ್ಪ ತಾಲೂಕು

ನಾಡ ಕಾರ್ಯಾಲಯ, ಕರೂರು, ಸಿರುಗುಪ್ಪ ತಾಲೂಕು

ಇವರ ಪ್ರತಿಯನ್ನು:
ಜಾಗೃತಿ
1. ವಾದಿ ಹಾಗೂ ಪ್ರತಿವಾದಿಗಳು
2. ತಹಶೀಲ್ದಾರರ ಕಾರ್ಯಾಲಯ ಸಿರುಗುಪ್ಪ ಗಣಕೀಕರಣ ಶಾಖೆಗೆ ಮುಂದಿನ ಕ್ರಮಕ್ಕಾಗಿ